ಕೊಪ್ಪಳಕ್ಕೆ ತಾಂತ್ರಿಕ ಶಿಕ್ಷಣ ಸೌಲಭ್ಯ

383 - ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ತಾಲ್ಲೂಕಿನ ನಗರದ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದ ಸೌಲಭ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕೊಪ್ಪಳ ತಾಲ್ಲೂಕಿನ ನಗರದ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣದ ನಂತರ ತಾಂತ್ರಿಕ ಶಿಕ್ಷಣಕ್ಕಾಗಿ ಬೇರೆ ನಗರಗಳಿಗೆ ಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಇತ್ತೀಚೆಗೆ ಕೊಪ್ಪಳ ಸಮೀಪ ಕಿರ್ಲೋಸ್ಕರ ಕಲ್ಯಾಣಿ ಮುಂತಾದ ಬೃಹತ್ ಉದ್ದಮೆಗಳು ಪ್ರಾರಂಭವಾಗಲಿರುವುದರಿಂದ ಅವುಗಳಲ್ಲಿ ಕೆಲಸಕ್ಕೆ ಸೇರಬಯಸುವ ಸ್ಥಳೀಯ ಅಭ್ಯರ್ಥಿಗಳಿಗೆ ತಾಂತ್ರಿಕ ಶಿಕ್ಷಣದ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಈ ಕೊರತೆಯನ್ನು ನೀಗಲು ಸರ್ಕಾರದವರು ಕೊಪ್ಪಳ ನಗರಕ್ಕೆ ಹೆಚ್ಚಿನ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಮಂಜೂರು ಮಾಡುವರೇ?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು.

ಇ) ಕೊಪ್ಪಳದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಅಗತ್ಯತೆಯನ್ನು ಪರಿಶೀಲಿಸಲು ಸಮಿತಿಯೊಂದನ್ನು ನೇಮಿಸಲಾಗಿದೆ.

ಈ) ಸದರಿ ಸಮಿತಿಯ ವರದಿಯನ್ನು ಅವಲಂಬಿಸಿ ಮಂಜೂರಾತಿ ನೀಡುವ ಬಗ್ಗೆ ಪರಿಶೀಲಿಸಲಾಗುವುದು

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವನ್ನೊದಗಿಸಿದ್ದಾರೆ. ಕೊಪ್ಪಳದಲ್ಲಿ ಸರ್ಕಾರಿ ಪಾಲಿಟೆಕ್ನಿಕನ್ನು ಸ್ಥಾಪನೆ ಮಾಡುವ ಬಗ್ಗೆ ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಹಾಗಿದ್ದಮೇಲೆ ಆ ಸಮಿತಿಯನ್ನು ಎಂದು ರಚಿಸಿದ್ದೀರಿ? ಈ ಸಮಿತಿಯು ವರದಿಯು ಬರುವುದೊಳಗಾಗಿ ಅಲ್ಲಿನ ಸ್ಥಳೀಕರಿಗೆ ನೇಮಕಾತಿಗೆ ಅವಕಾಶ ಸಿಗುತ್ತದೆಯೋ, ಅಥವಾ ಇಲ್ಲವೋ ಎಂದು ಸರ್ಕಾರ ಚಿಂತನೆ ಮಾಡಿ ಉತ್ತರವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಅಧ್ಯಕ್ಷರೆ, ಹೊಸದಾಗಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭ ಮಾಡುವ ಬಗ್ಗೆ ಪರಿಶೀಲನೆ ಮಾಡಲು ನಮ್ಮ ತಾಂತ್ರಿಕ ನಿರ್ದೇಶಕರು ಒಂದು ಸಮಿತಿಯನ್ನು ಮಾಡಿದ್ದಾರೆ. ಅಲ್ಲಿ ಸರ್ಕಾರಿ ಪಾಲಿಟೆಕ್ನಿಕನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಸದಸ್ಯರು ಇಚ್ಛೆ ಇದೆ.

ಅದರ ವರದಿ ಬಂದಮೇಲೆ ಮತ್ತು ಮುಂದಿನ ವರ್ಷದಲ್ಲಿ ಸರ್ಕಾರಿ ಪಾಲಿಟೆಕ್ನಿಕಗಳನ್ನು ತೆರೆಯಲು ಅಗತ್ಯವಾಗಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನಮಗೆ ಅಲ್ಲಿ ಅವಕಾಶ ಸಿಗುವುದಿಲ್ಲ. ಈಗಾಗಲೇ ಒಂದು ಕಾರ್ಖಾನೆ ಪಾರಂಭವಾಗಿದೆ. ಸ್ಥಳೀಯರನ್ನು ಒಟ್ಟಿಗೆ ತೆಗೆದುಕೊಂಡು ಏನು ಕೇಳಿದರೂ ಟೆಕ್ನಿಕಲ್ ಎನ್ನುತ್ತಾರೆ. ಟೆಕ್ನಿಕಲ್ ಅಂದರೆ ಇಡೀ ತಾಲ್ಲೂಕಿನಲ್ಲಿ ಒಂದು ಶಿಕ್ಷಣ ಸಂಸ್ಥೆಇದೆ. ಹಾಗಾಗಿ ನಮಗೆ ಬಹಳ ಅನ್ಯಾಯವಾಗಿದೆ. ಅದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ, ನಿಮಗೆ ಕೇಳಿಸಲಿಲ್ಲವೆಂದು ಕಾಣುತ್ತದೆ.

ಅದ್ಯಕ್ಷರು : ಆರೋಗ್ಯ ಸಚಿವರು ಇಲ್ಲವಲ್ಲ. ಅವರನ್ನು ಕರೆಯಿಸಿ ಎಂದು ವಿಪ್ ಅವರಿಗೆ ಹೇಳಿದ್ದೇನೆ. ಬಹುಶಃ ಮಂತ್ರಿಗಳಿಗೆ ಆರೋಗ್ಯ ತೊಂದರೆ ಇದ್ದಹಾಗೆ ಕಾಣುತ್ತದೆ.

ಅಧ್ಯಕ್ಷರು : ಮಂತ್ರಿಗಳು ಇಲ್ಲವಲ್ಲ. ಎಲ್ಲಾ ಆರೋಗ್ಯ ಸಚಿವರದ್ದೆ ಇದೆಯಲ್ಲ. ನಿಮ್ಮ ಹತ್ತಿರ, ಯಾರ ಹತ್ತಿರವಾದರೂ ಉತ್ತರ ಇದೆಯೆ? ಸಪ್ಲಿಮೆಂಟರಿಗೆ ಅನ್ಸರ್ ಮಾಡುತ್ತೀರಾ? ನೋಡಿ, ಪರಿಸ್ಥಿತಿ ಯಾವ ತರಹ ಇದೆ? ನೋಡಿ. ನೀವು ಇದ್ದಾಗ ಹೀಗೇ ಮಾಡುತ್ತೀದ್ದಿರೋ?

ಶ್ರೀ ಯು.ಆರ್. ಸಭಾಪತಿ : ಆಡಳಿತ ಪಕ್ಷದವರು ಬಾಯಕಾಟ್ ಮಾಡಿದ ಹಾಗೆ ಇದೆ. ಪ್ರಶ್ನೆಗಳು ಬರುವುದೇ ಅಪರೂಪ . ಬಂದಾಗ ಉತ್ತರಿಸುವುದಕ್ಕೆ ಮಂತ್ರಿಗಳು ಇಲ್ಲದಿದ್ದರೆ ಬಹಳ ಕಷ್ಟ. ವಿರೋಧ ಪಕ್ಷದವರೊಡನೆ ಇವರೂ ಸಹಮತರಾಗಿದ್ದಾರೆಂಬ ಸಂಶಯ ಬರುತ್ತಿದೆ.

ಅಧ್ಯಕ್ಷರು : ನೀವು ಹೇಳುವುದು ಸತ್ಯ ಮಹಾರಾಯರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಂತ್ರಿಗಳು ಬಾಯಕಾಟ್ ಮಾಡಿದ್ದಾರೆಂದು ಹೇಳುತ್ತಾರೆ.

ಅಧ್ಯಕ್ಷರು : ಯಾರು ಯಾರು ಏನೇನು ಮಾಡಿದ್ದಾರೋ, ನಮಗೆ ಹೇಳಿ ಮಾಡುತ್ತೀರೇನು ನೀವು ? ಎಂತಹ ಕಷ್ಟ ನೋಡಿ ನನಗೆ. ನಾವು 11.15ಕ್ಕೆ ಸಭೆ ಪ್ರಾರಂಭ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಸಂಬಂಧಪಟ್ಟ ಮಂತ್ರಿಗಳು ಕರೆಯಿಸುವುದಕ್ಕೆ ವ್ಯವಸ್ಥೆ ಮಾಡಿ, ಪ್ರಶ್ನೆಗಳಿಗೆ ಉತ್ತರವನ್ನಾದರೂ ಕೊಡಲಿ.

ಒಬ್ಬ ಮಾನ್ಯ ಸದಸ್ಯರು : 18 ಮತ್ತು 19ನೇ ತಾರೀಖಿನ ಪ್ರಶ್ನೆಗಳು ಹಾಗೇ ಇವೆ. ಅವನ್ನಾದರೂ ಇವತ್ತು ತೆಗೆದುಕೊಳ್ಳುವ ವ್ಯವಸ್ಥೆ ಮಾಡುತ್ತೀರಾ?

ಅಧ್ಯಕ್ಷರು : ನಿನ್ನೆ ಅದನ್ನೆಲ್ಲ ಟೇಬಲ್ ಮೇಲೆಲೇ ಮಾಡಿದೆವಲ್ಲ. ಮಾನ್ಯ ಆರೋಗ್ಯ ಸಚಿವರು ಹೆಸರಿನ ಮುಂದಿರತಕ್ಕ ಪ್ರಶ್ನೆಗಳು ಇವತ್ತು ಯಾವುದು ಇತ್ತು ಅವನ್ನು ನಾಳೆಯ ಕಾರ್ಯಕ್ರಮಕ್ಕೆ ನಾನು ತೆಗೆದುಕೊಳ್ಳುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ಸಹಕರಿಸಬೇಕು.

ಶ್ರೀ ಡಿ. ನಾರಾಯಣ ದಾಸ್ : ಮಾನ್ಯ ಆರೋಗ್ಯ ಮಂತ್ರಿಗಳಿಗೆ ಆರೋಗ್ಯ ಸರಿ ಇಲ್ಲವೆ, ಏನಿದು? ಇದು ಬಹಳ ಕೆಟ್ಟ ಸಂಪ್ರದಾಯ. ಸದಸ್ಯರುಗಳು ಕೇಳಿದ ಪ್ರಶ್ನೆಗಳಿಗೆ ಮಂತ್ರಿಗಳು ಇಲ್ಲವೆಂದರೆ ಏನು ಅರ್ಥ?

ಶ್ರೀ ವಿ. ಮುನಿಯಪ್ಪ : ಪ್ರಶ್ನೆ ಇದ್ದು ಮಂತ್ರಿಗಳು ಬಂದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಏನು ವಿಚಾರ ಎಂದು ತಿಳಿದುಕೊಂಡು ಆಮೇಲೆ ನಾನು ನಿಮಗೆ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಆರೋಗ್ಯ ಮಂತ್ರಿಗಳು ಅಂದಾಕ್ಷಣ ಯಾವಾಗಲೂ ಆರೋಗ್ಯವಾಗಿರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅವರು ಇರುವಂಥ ಪರಿಸರ ಅಂಥದ್ದು.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಆರೋಗ್ಯ ಸರಿಯಿಲ್ಲವೆಂದರೆ ತಿಳಿಸಿ ಹೋಗಬೇಕಲ್ಲ. ಜವಾಬ್ದಾರಿ ಇರತಕ್ಕ ಮಂತ್ರಿಗಳು ಆರೋಗ್ಯ ಸರಿಯಿಲ್ಲದಿದ್ದರೆ ಅಧ್ಯಕ್ಷರಿಗೆ ತಿಳಿಸಿ ಅನುಮತಿ ಪಡೆದುಕೊಂಡು ಹೋಗಬೇಕು.

ಒಬ್ಬ ಮಾನ್ಯ ಸದಸ್ಯರು : ಆರೋಗ್ಯ ಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆಂದು ಸಭಾಧ್ಯಕ್ಷರು ಹೇಳಿದ್ದಾರಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಜಾಪುರ ಜಿಲ್ಲೆಯಲ್ಲಿ ಹಿಂದಿ ಶಿಕ್ಷಕರ ನೇಮಕಾತಿ.

378 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಇರುವ ಹಿಂದಿ ಶಿಕ್ಷಕರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಒಟ್ಟು ಹಿಂದಿ ಶಿಕ್ಷಕರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ಒದಗಿಸುವುದು)

ಇ) ಈ ಖಾಲಿ ಸ್ಥಾನಗಳನ್ನು ಯಾವಾಗ ತುಂಬಲಾಗುವುದು? ಭರ್ತಿ ಮಾಡಲು ಅನುಸರಿಸುತ್ತಿರುವ ನಿಯಮಗಳೇನು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಮಧ್ಯಮ ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಾಲೆಗಳು : 230

ಪ್ರೌಢ ಶಾಲೆಗಳು : 63

ವಿವರವನ್ನು ಅನುಬಂಧ- 1ರಲ್ಲಿ ನೀಡಲಾಗಿದೆ.